ನಾನು ಈ ಮನೆಯಲ್ಲಿ ಹುಟ್ಟಿದರೂ ಬೆಳೆದದ್ದೆಲ್ಲ ನೆರೆಯ ಪಟ್ಟಣದಲ್ಲಿ; ಸಮಸ್ತ ಜಾತಿ, ಧರ್ಮ, ಕಸುಬಿನವರು ವಾಸಿಸುವ ಕೇರಿಗಳಲ್ಲಿದ್ದ ಬಾಡಿಗೆ ಮನೆಗಳಲ್ಲಿ. ಆ ಮನೆಗಳೊ ಒಂದಕ್ಕಿಂತ ಒಂದು ಬೆರಕೆಯಿದ್ದವು. ನಾವು ಹೊಕ್ಕ ಮೊದಲನೇ ಮನೆ ಕೆಂಪುಹೆಂಚಿನದಾಗಿದ್ದು ಹುಲ್ಲಿನ ಮನೆಯಿಂದ ಬಂದ ನಮಗದು ಅರಮನೆಯಾಗಿತ್ತು. ಗೋರಿಗಳ ಪಕ್ಕದಲ್ಲಿದ್ದ ಅದು ಬಹುಶಃ ಪ್ರಾರ್ಥನೆ ಮಾಡುವವರಿಲ್ಲದೆ ಖಾಲಿಬಿದ್ದ ಚರ್ಚಾಗಿತ್ತು. ನಂತರ ಹೊಕ್ಕ ಮನೆಯೂ ಹೆಂಚಿನದೇ. ಇದು ನಮ್ಮ ಸೀಮೆಯ ಮನೆಗಳ ಸಮಸ್ತ ಲಕ್ಷಣಗಳನ್ನು ಧಾರಣಮಾಡಿತ್ತು. ಅವೆಂದರೆ ಮಂಗಳೂರು ಹೆಂಚಿನ ಛತ್ತು; ಅಗ್ಗದ ಹಸಿರುಬಣ್ಣ ಲೇಪಿಸಿದ ಗೋಡೆ; ರೆಡ್ಆಕ್ಸೈಡ್ ಉಜ್ಜಿದ ಗಾರೆನೆಲ; ಹೆಂಗಸರ ಮುದುಕರ ಅಗತ್ಯಕ್ಕೆ ಬೇಕಾಗಿ ಜಗಲಿಕಟ್ಟೆ ಹಾಗೂ ಇರಿಸಲು ಬಡಿಯದಂತೆ ತೆಂಗಿನಗರಿ ಪರದೆ ಕಟ್ಟಿದ ಹೊರಗೋಡೆ. ಮನೆಯ ಹಿಂದೆ ಅನಾಮಿಕ ಅವಧೂತನ ಆಶ್ರಮವಿದ್ದು, ಗದ್ದಿಗೆಯೆದುರು ತಿರಸೂಲ ನೆಟ್ಟ ಗುಂಡಿಯಲ್ಲಿ ಕೊರಡೊಂದು ಹೊಗೆಯಾಡುತ್ತಿತ್ತು. ಜಟೆಬಿಟ್ಟುಕೊಂಡು ಸೊಂಟಕ್ಕೆ ಕೌಪೀನ ವಿನಾ ಬತ್ತಲೆಯಿದ್ದ ಸಾಧುವೊಬ್ಬ ಅಲ್ಲಿರುತ್ತಿದ್ದನು. ನಮ್ಮ ವೇಷವೂ ಹೆಚ್ಚುಕಡಿಮೆ ಹಾಗೇ ಇದ್ದುದರಿಂದ ನಮಗೆಂದೂ ವಿಚಿತ್ರವೆನಿಸಲಿಲ್ಲ. ನಾನು ಬೀದಿಯಲ್ಲಾಡುವ ಅಮೂಲ್ಯ ಸ್ವಾತಂತ್ರ್ಯ ಕಳೆದುಕೊಂಡು, ಭೋರಾಡಿ ಅಳುತ್ತ ಶಾಲೆಯ ಉದ್ಘಾಟನೆ ಮಾಡಿಕೊಂಡಿದ್ದು ಇದೇ ಮನೆಯಿಂದ.

ಮೂರನೆಯದು ಪಾಳುಬಿದ್ದ ಮರಕೊಯ್ಯುವ ಸಾಮಿಲ್ಲಿನ ಕಾಂಪೌಂಡಿನೊಳಗಿದ್ದ ವಾಚ್‌ಮನ್ ಕ್ವಾರ್ಟಸ್ಸು. ಇದರ ವಿಶಿಷ್ಟತೆಯೆಂದರೆ ಸುಡುಗಾಡು ಸಮೀಪದಲ್ಲಿದ್ದುದು. ರಾತ್ರಿಯಾದರೆ ಗವ್ವೆಂದು ತುಂಬಿಕೊಳ್ಳುತ್ತಿದ್ದ ಕತ್ತಲಲ್ಲಿ ದೆವ್ವಗಳ ಕತೆಗಳೆಲ್ಲ ಜೀವತಳೆದು ಕನಸಿನೊಳಗೆ ಅತಿಕ್ರಮ ಪ್ರವೇಶಮಾಡಿ ನಿದ್ದೆಗೆಡಿಸುತ್ತಿದ್ದವು. ಮುಂದೆ ಸದರಿ ಕಾಂಪೌಂಡನ್ನು ಈಚಲುಹೆಂಡದ ಪೆಂಟೆಯವರು ಬಾಡಿಗೆ ಹಿಡಿದರು. ದೊಡ್ಡ ಪಿಪಾಯಿಗಳಲ್ಲಿ ಬರುತ್ತಿದ್ದ ಎದೆಹಾಲಿನಂತಹ ತಾಜಾಹೆಂಡವು ದೊಡ್ಡದೊಂದು ಮರದ ತೊಟ್ಟಿಯಲ್ಲಿ ಭರತಿಯಾಗುತ್ತಿತ್ತು. ಬಳಿಕ ಬಾಟಲಿಗಳಿಗೆ ತುಂಬಲ್ಪಟ್ಟು ಕೇಸುಗಳ ಮೂಲಕ ಗಡಂಗುಗಳಿಗೆ ರವಾನೆಯಾಗುತ್ತಿತ್ತು. ದೆವ್ವಕ್ಕೆ ಹೆದರದ ನಾವು ಕಟುಕಂಪನ್ನು ಸೂಸುತ್ತಿದ್ದ ಹುಳಿಹೆಂಡಕ್ಕಂಜಿ ಮನೆಖಾಲಿ ಮಾಡಬೇಕಾಯಿತು. ನಾಲ್ಕನೆಯದು ಸಂತೆಮೈದಾನಕ್ಕೆ ಸಮೀಪವಿತ್ತು. ಆಗಸದಲ್ಲಿ ಚಂದ್ರನ ಸುತ್ತ ನೆರೆಯುವ ನಕ್ಷತ್ರಗಳಂತೆ, ಮನೆಯ ದಶದಿಕ್ಕಿಗೂ ರೈಲ್ವೆಸ್ಟೇಶನ್ನು, ಸಿನಿಮಾ ಟಾಕೀಸು, ಮಾಂಸದಂಗಡಿ, ಹೆಂಡದ ಗಡಂಗು, ಕಾಕಾಅಂಗಡಿ ಸ್ಥಾಪನೆಯಾಗಿದ್ದವು. ಸೆಕೆಂಡ್‌ಶೊ ಸಿನಿಮಾದ ಡೈಲಾಗು ಹಾಗೂ ಡಿಶುಂ ಸದ್ದುಗಳನ್ನು ಮನೆಯಲ್ಲಿದ್ದೇ ಕೇಳಬಹುದಿತ್ತು. ಆದರೆ ನಮಗೆ ಟಾಕೀಸಿಗಿಂತ ಹೆಚ್ಚಿನ ಮನೋರಂಜನೆ ಗಂಡಂಗಿನ ಮುಂದೆ ಸಿಗುತ್ತಿತ್ತು. ಅದೊಂದು ಉದ್ದನೆಯ ಪರ್ಣಶಾಲೆ. ಮುಂದೆ ಅಂಗಣದಲ್ಲಿ ಹರಡಿದ ಸಕ್ಕರೆ ಮಳಲು. ಅದರ ಮೇಲೆ ನಿರಂಕುಶಮತಿಗಳಾದ ಜನ ಕುಳಿತು, ಉರುಳದಂತೆ ಬಾಟಲಿಯನ್ನು ಮಳಲಿನಲ್ಲಿ ನೆಟ್ಟಗೆ ನಿಲ್ಲಿಸಿ, ಮುತ್ತುಗದೆಲೆಯಲ್ಲಿದ್ದ ಬೋಟಿ–ಚಾಕಣ ನಂಜಿಕೊಂಡು, ಬೇಯಿಸಿದ ಮೊಟ್ಟೆ ತಿನ್ನುತ್ತ ಹೆಂಡ ಸವಿಯುತ್ತಿದ್ದರು. ಅವರು ನಿಷ್ಕಾರಣವಾಗಿ ಹೊಡೆದಾಡುತ್ತಿದ್ದರು ಮತ್ತು ಮರುಕ್ಷಣವೇ ಒಬ್ಬರು ಇನ್ನೊಬ್ಬರಿಗೆ ತಿನಿಸುವ ಕುಡಿಸುವ ಮಮತೆ ತೋರುತ್ತಿದ್ದರು. ಲೋಕದಲ್ಲಿ ಯುದ್ಧ ಮತ್ತು ಶಾಂತಿಗಳು ಸಮರಸದಲ್ಲಿರುವ ತಾಣವೆಂದರೆ ಪಾನಶಾಲೆಯೇ. ಶುಕ್ರವಾರ ಸಂತೆಗೆ ಬಂದ ಕೆಲವರು ತೀರ್ಥ ಹೆಚ್ಚಾಗಿ, ರಾತ್ರಿ